## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

| | |
|---|---|
| **Spl. Case No.** | **87/2016** |

| | | |
|---|---|---|
| ಸಾಕ್ಷಿದಾರರ ಹೆಸರು | ಕೃಷ್ಣಮೂರ್ತಿ | |
| ತಂದೆಯ ಹೆಸರು | ವೀರಪ್ಪ | ಸಾಕ್ಷಿಗೆ ದಿಃ 05.06.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 44 ವರ್ಷ | |
| ಉದ್ಯೋಗ | ಕೂಲಿ ಕೆಲಸ | PW -04 |
| ವಾಸ ಸ್ಥಳ | ಚಿಕ್ಕಸಂದ್ರ, ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಜಿಲ್ಲೆ | CW.4 |

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಫಿರ್ಯಾದುದಾರರ ಪರಿಚಯ ಇದೆ. ಫಿರ್ಯಾದುದಾರರು ಪರಿಶಿಷ್ಟ ಜಾತಿ (ಮಾದಿಗ) ಯವರು ಇರುತ್ತಾರೆ. ಫಿರ್ಯಾದುದಾರನಿಗೆ ಚಾಸಾ-6 ಗೋವಿಂದರಾಜು, ಚಾಸಾ-7 ವೆಂಕಟರಾಜು ಮತ್ತು ಚಾಸಾ-8 ಶ್ರೀನಿವಾಸ ಮೂರು ಜನ ಮಕ್ಕಳಿದ್ದುಅದರಲ್ಲಿ ಶ್ರೀನಿವಾಸ ಮೃತಪಟ್ಟಿರುತ್ತಾರೆ. ಫಿರ್ಯಾದುದಾರರ ಜಮೀನು ಇರುವುದು ನನಗೆ ಗೊತ್ತಿಲ್ಲ. ನಾನು ಅವರ ಜಮೀನಿಗೆ ಹೋಗಿರುವುದಿಲ್ಲ. ಆರೋಪಿತರು ಫಿರ್ಯಾದುದಾರನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿ ಜಾತಿ ನಿಂದನೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಆರೋಪಿತರು ಫಿರ್ಯಾದುದಾರನಿಗೆ ಚಪ್ಪಲಿಯಿಂದ ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ. ನಿಪಿ-2 ರ ಭಾವಚಿತ್ರದಲ್ಲಿ ಕಾಣುವ ಅಂಬೇಡ್ಕರ್ ಭಾವಚಿತ್ರಕ್ಕೆ ಹಾನಿ ಮಾಡಿರುವುದು ನಾನು ನೋಡಿರುವುದಿಲ್ಲ. ಆ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನೀಡಿರುವುದರಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

2. ಫಿರ್ಯಾದುದಾರಿಗೆ ಚಿಕ್ಕಸಂದ್ರ ಗ್ರಾಮದಲ್ಲಿ ಸರ್ವೆ ನಂಬರ್ 45 ರಲ್ಲಿ 8 ಗುಂಟೆ ಜಮೀನು ಇದ್ದು ಅದು ಅವರ ಸ್ವಾಧೀನದಲ್ಲಿಇತ್ತು ಎಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿಃ31.12.2015 ರಂದು ಬೆಳಗ್ಗೆ 7 ಘಂಟೆಗೆ ನಾನು ಜಮೀನಿನ ಹತ್ತಿರ ಹೋಗಿದ್ದ ಸಮಯದಲ್ಲಿ ಫಿರ್ಯಾದಿ ಮತ್ತು ಆತನ ಮಕ್ಕಳು ಹುಣಸೇಹಣ್ಣನ್ನು ಕೆಡವುತ್ತಿದ್ದಾಗ ಆರೋಪಿತರು ಜಮೀನಿನಲ್ಲಿ ಏಕಾಏಕಿ ನುಗ್ಗಿ ಗಲಾಟೆ ಮಾಡಿ ಬಾಯಿಗೆ ಬಂದಂತೆ ಬೈದು ಮಾದಿಗ ನನ್ನ ಮಕ್ಕಳು, ಜಮೀನಿಗೆ ಹೇಗೋ ಬಂದಿರಿ ಎಂದು ಜಾತಿ ನಿಂದನೆ ಮಾಡಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿ ಸ್ಥಳದಲ್ಲಿ ಇದ್ದ ಅಂಬೇಡ್ಕರ್ ರವರ ಭಾವಚಿತ್ರವನ್ನು ಕಿತ್ತು ಹಾಕಿ ಅವಾಚ್ಯವಾಗಿ ಬೈದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಈಗ ನಾನು ಓದಿ ಹೇಳಿದಂತೆ ಚಿಕ್ಕಸಂದ್ರ ಗ್ರಾಮದ -- - - - - - - - ನೋಡಿದರೆ ಗುರ್ತಿಸುತ್ತೇನೆ ಎಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಹೇಳಿಕೆಯನ್ನು ನಿಪಿ-6 ಎಂದು ಗುರ್ತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಸಿ ಆರ್ ಆರ್ ರವರಿಂದಃ**

ಪಾಟೀ ಸವಾಲುಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಡ್ಡಲಾಯಿತು.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.